**Ravi Belagere in HI BENGALUR about Smruti Vismruti : Bharathiya Samskruti**

## ಹಾಯ್ ಬೆಂಗಳೂರಿನಲ್ಲಿ ರವಿ ಬೆಳಗೆರೆ : '*ಸ್ಮೃತಿ ವಿಸ್ಮೃತಿ; ಭಾರತೀಯ ಸಂಸ್ಕೃತಿ*'

## ಕೃತಿಯ ಕುರಿತು



# ಪಲ್ಲಕ್ಕಿಗೆ ಹೆಗಲು ಕೊಡುವ ಮೂಢರ ನಾಡಿಗೊಬ್ಬ ಬಾಲುವಿನಂತಹ ಚಿಂತಕ ಬರಲಿ!

ಒಂದು ಭಾಷಣ.

ಅಂಥದನ್ನು ಕೇಳಿ ತುಂಬ ವರ್ಷಗಳೇ ಆಗಿದ್ದವು. ಕಳೆದ ಕೆಲವು ತಿಂಗಳುಗಳಿಂದ ನಾನು ಸಭೆ ಸಮಾರಂಭಗಳಿಗೆ ಹೋಗುತ್ತಿರಲಿಲ್ಲ. ಆ ನನ್ನ ವ್ರತವನ್ನು ಭಂಗಗೊಳಿಸಿದವರು ನನ್ನ ಮೆಚ್ಚಿನ ಲೇಖಕಿ ಬಿ.ಯು.ಗೀತಾ. ಅವರ ಪುಸ್ತಕ ಬಿಡುಗಡೆಗೆ ಹೋಗಿದ್ದೆ. ಹೊರ ಊರುಗಳಿಗೆ ಹೋಗಿ ಭಾಷಣ ಮಾಡುವ ಹುರುಪು, ಚೈತನ್ಯ ಎರಡೂ ನನ್ನಲ್ಲಿರಲಿಲ್ಲ. ಆದರೆ ಮೊನ್ನೆಗೆಳೆಯ ರಾಜಾರಾಮ ಹೆಗಡೆ ಫೋನು ಮಾಡಿ, "ನೀವು ಬಂದರೆ ಚೆನ್ನಾಗಿರುತ್ತೆ..." ಅಂತ ಸಂಕೋಚದಿಂದಲೇ ಪೀಠಿಕೆ ಹಾಕಿದರು. ಅವರು ಕುವೆಂಪು ವಿಶ್ವವಿದ್ಯಾಲಯದಲ್ಲಿ ಇತಿಹಾಸ ವಿಭಾಗದ ಪ್ರಾಧ್ಯಾಪಕರು. ವಿಪರೀತ ಸಂಕೋಚದ, ಸ್ಪಷ್ಟ ಚಿಂತನೆಯ, ನಿರಂತರವಾಗಿ ಕೆಲಸದಲ್ಲಿ ತೊಡಗಿಕೊಳ್ಳುವ ಚಿಂತಕ, ಮೇಷ್ಟ್ರು. ಅವರಿಗೂ-ನನಗೂ ಮೊದಲು ಕೊಂಡಿಯಾದದ್ದು ಅಶೋಕ ಶೆಟ್ಟರ್. ಮುಂದೆ ರಾಜಾರಾಮ ಹೆಗಡೆಯ ಅಣ್ಣಂದಿರು, ತಮ್ಮ, ಅವರ ಮಕ್ಕಳು-ಹೀಗೆ ಇಡೀ ಜನಕ್ಕೆ ಕುಟುಂಬವೇ ನನ್ನ ಆಪ್ತ ಮಿತ್ರರ ಬಳಗವಾಗಿ ಹೋಯಿತು. "ನಾನು ಅನುವಾದಿಸಿದ ಪುಸ್ತಕವನ್ನು ನೀವು ಬಿಡುಗಡೆ ಮಾಡಿದರೇನೇ ಸರಿ" ಅಂದರು ರಾಜಾರಾಮ ಹೆಗಡೆ. "ಸರಿ" ಅಂದೆ.



ಈ ಪುಸ್ತಕದ್ದೂ ಒಂದು ಕಥೆ. ಈಗೊಂದೆರಡು ವರ್ಷಗಳಿಂದ ನಮ್ಮ ಮಿತ್ರ ಬಳಗದಲ್ಲಿ ಆಗಾಗ ಚರ್ಚೆಗೆ ಬರುತ್ತಿದ್ದವರು ಬಾಲಗಂಗಾಧರ. ಅವರು ಬೆಲ್ಜಿಯಮ್‌ನ ವಿಶ್ವವಿದ್ಯಾಲಯವೊಂದರಲ್ಲಿ ಪ್ರೊಫೆಸರು. ಅಲ್ಲೇ ಮದುವೆಯಾಗಿ, ನೆಲೆಗೊಂಡಿದ್ದಾರೆ. ಮೂಲತಃ ಚಾಮರಾಜಪೇಟೆಯ ಭಯಂಕರ ತೀಕ್ಷ್ಣಮತಿ ಸಂಕೇತಿ ಬ್ರಾಹ್ಮಣ. ನಮ್ಮ ಭೇಟಿ ಆಗಿರಲಿಲ್ಲವಾದರೂ, ಪರಸ್ಪರರ ಬಗ್ಗೆ ಕುತೂಹಲವಿತ್ತು. ಒಮ್ಮೆ ಅನಿರೀಕ್ಷಿತವಾಗಿ ವಿಶ್ವೇಶ್ವರ ಭಟ್ಟರು ತಮ್ಮೊಂದಿಗೆ ಡಾ.ಬಾಲಗಂಗಾಧರರನ್ನು ಕರೆದುಕೊಂಡು ಕಚೇರಿಗೆ ಬಂದರು "ಬಾಲೂ!" ಎಂಬ ಉದ್ಗಾರದೊಂದಿಗೆ ಮಾತು ಶುರುವಾಯಿತು. ನನಗಿಂತ ಹಿರಿಯರಾದ ಬಾಲು ನನ್ನೊಂದಿಗೆ ಸಹಜ ಸಲುಗೆಯಿಂದಲೇ ವರ್ತಿಸಿದರು. ಅವರೊಂದಿಗೆ ಅವತ್ತು ಕುವೆಂಪು ವಿಶ್ವವಿದ್ಯಾಲಯದ ಪ್ರೊ.ಸದಾನಂದ ಕೂಡ ಇದ್ದರು. ಅವತ್ತಿನ ಚರ್ಚೆಯಲ್ಲೇ ನನಗೆ ಬಾಲು ಅವರ ಹೊಸ ಸಿದ್ಧಾಂತದ ಪರಿಚಯ ಸ್ವಲ್ಪಮಟ್ಟಿಗೆ ಆದದ್ದು. ನಿನ್ನೆ ಬಿಡುಗಡೆಯಾದದ್ದು ಬಾಲು ಅವರದೇ ಆದ The Heathen in his Blindness ಪುಸ್ತಕದ ಕನ್ನಡಾನುವಾದ. ರೆಟ್ಟೆ ಗಾತ್ರದ ಈ ಪುಸ್ತಕವನ್ನು ನಾನಿನ್ನೂ ಓದಿಲ್ಲ. ಆದರೆ ಪುಸ್ತಕದ ಬಗ್ಗೆ ತುಂಬ ಸ್ಪಷ್ಟವಾಗಿ ಮಾತನಾಡಿದ ಪ್ರೊ.ಶಿವರಾಮ ಕೃಷ್ಣನ್ ಅವರ ಭಾಷಣವನ್ನು ಶ್ರದ್ಧೆಯಿಂದ ಕೇಳಿಸಿಕೊಂಡೆ. ನನಗೆ ನನ್ನ ಕಮ್ಯುನಿಸ್ಟ್ ಚಳವಳಿಯ ದಿನಗಳು ನೆನಪಾದವು.

"ಚಾಮರಾಜಪೇಟೆಯ ಬಾಲು ಆ ದಿನಗಳಲ್ಲಿ ವಿಪರೀತ ಓದುತ್ತಿದ್ದವರು. ಅವರದೊಂದು ಪುಟ್ಟ ಗುಂಪಿತ್ತು. ಅವರೆಲ್ಲ ಟ್ರಾಟ್‌ಸ್ಕಿ ಪ್ರಭಾವಕ್ಕೆ ಸಿಲುಕಿದವರು ಎಂಬ ಗುಮಾನಿ ನಮಗಿತ್ತು. ನಾವು ಬೇರೆಯದೇ ಗುಂಪಿನ ಪರಿಶುದ್ಧ ಮಾರ್ಕ್ಸಿಸ್ಟ್ ಚಿಂತಕರು. ಕಡೆಗೆ ಬಾಲು ಯೂರೋಪಕ್ಕೆ ಹೋದರು ಅಂತ ಗೊತ್ತಾಯಿತು. ಮಾರ್ಕ್ಸ್‌ನ 'ದಾಸ್ ಕ್ಯಾಪಿಟಲ್' ಗ್ರಂಥವನ್ನು ಪೂರ್ತಿಯಾಗಿ ಓದಿದ ಕೆಲವೇ ಕಮ್ಯುನಿಸ್ಟರಲ್ಲಿ ಒಬ್ಬರಾದ ಬಾಲು, ಮಾರ್ಕ್ಸ್‌ವಾದವನ್ನು ಅರ್ಥ ಮಾಡಿಕೊಳ್ಳಲು ಯೂರಪ್‌ಗೇ ಹೋದರು ಅಂತ ತಮಾಷೆ ಮಾಡಿಕೊಂಡಿದ್ದೆವು. ಆದರೆ ಬಾಲು ತುಂಬ ಸ್ವತಂತ್ರ ವಿಚಾರವೊಂದನ್ನು ಕೆಲವು ವರ್ಷಗಳ ನಂತರ ಪ್ರತಿಪಾದಿಸತೊಡಗಿದರು. ನಾನು ತುಂಬ ಎಕ್ಸೈಟ್ ಆಗಿ ಅವರನ್ನು ಓದತೊಡಗಿದೆ" ಎಂದು ಮಾತಿಗಾರಂಭಿಸಿದರು ಪ್ರೊ.ಶಿವರಾಮಕೃಷ್ಣನ್.

ಒಂದು ವಿಷಯವನ್ನು ಬಾಲು ನನ್ನೊಂದಿಗೂ ಪ್ರಸ್ತಾಪಿಸಿದ್ದರು. ನೋಡು ರವೀ, ಪೂರ್ವ ಮತ್ತು ಪಶ್ಚಿಮ ದೇಶಗಳಲ್ಲಿ ಅಗಾಧವಾದ ಸಾಂಸ್ಕೃತಿಕ, ಮಾನಸಿಕ, ಚಿಂತನಾ ಶೈಲಿಯ ವ್ಯತ್ಯಾಸಗಳಿವೆ. ಮೊದಲು ನಾನು ಅದನ್ನು ಗುರುತಿಸಿದ್ದು ಬೆಲ್ಜಿಯಮ್‌ನ ನನ್ನ ಗೆಳತಿಯ ವರ್ತನೆಯಲ್ಲಿ. ಅವರು ಗ್ರಹಿಸುವ ರೀತಿಯೇ ಭಿನ್ನ. ಹೀಗಾಗಿ, ಬ್ರಿಟಿಷರು ಭಾರತಕ್ಕೆ ಬಂದಾಗ ಅವರು ಈ ದೇಶದಲ್ಲಿ ಅಸಲಿಗೆ ಅಸ್ತಿತ್ವದಲ್ಲೇ ಇಲ್ಲದ ಒಂದು ರಿಲಿಜಿಯನ್ನನ್ನು ಹುಡುಕಿದರು. ಈ ಕೆಲಸ ಮೊಟ್ಟ ಮೊದಲ ಬಾರಿಗೆ ರೋಮ್‌ನಲ್ಲಿ ಆಗಿತ್ತು. ಕ್ರೈಸ್ತ ಧರ್ಮ ಸಂಸ್ಥಾಪನೆ ಮಾಡುವಾಗ ಅದಕ್ಕೊಂದು ಸಿದ್ಧಾಂತ ಹುಟ್ಟುಹಾಕಿದರು. ಮುಂದೆ ಕ್ರೈಸ್ತ ಧರ್ಮದಲ್ಲೇ ವಿಪ್ಲವವುಂಟಾಗಿ, ಅಲ್ಲಿ ಪ್ರಾಟೆಸ್ಟೆಂಟ್ ಧರ್ಮ ಹುಟ್ಟಿಕೊಂಡಿತು. ನಂತರ ಅದೂ ತನ್ನ ವೇಷ ಕಳಚಿಕೊಂಡಿತು. ತನಗೂ ಕ್ರೈಸ್ತ ಧರ್ಮಕ್ಕೂ ಸಂಬಂಧವಿಲ್ಲವೇನೋ ಎಂಬಂತೆ ಒಂದು ಸೆಕ್ಯುಲರ್ ಪೋಷಾಕು ತೊಟ್ಟು, ಅದೇ ಕ್ರೈಸ್ತ-ರೋಮನ್ ಕನ್ನಡಕದ ಮೂಲಕ ಜಗತ್ತನ್ನ, ವಿಜ್ಞಾನವನ್ನ, ಸಾಹಿತ್ಯವನ್ನ, ರಿಲಿಜಿಯನ್‌ನನ್ನ ನೋಡಲಾರಂಭಿಸಿತು. ಇವತ್ತಿನ ನಮ್ಮ ಫಜೀತಿಯೆಂದರೆ, ನಾವೆಲ್ಲ ಅದೇ 'ಕ್ರೈಸ್ತ ಸೆಕ್ಯುಲರ್' ಕನ್ನಡಕದ ಮೂಲಕ ಇಂಗ್ಲಿಷರ ಶಾಲೆಗಳಲ್ಲಿ

▶▶ 11

◀◀ 3

# ...ನಾಡಿಗೊಬ್ಬ ಬಾಲುವಿನಂತಹ ಚಿಂತಕ ಬರಲಿ!

ವಿದ್ಯಾಭ್ಯಾಸ ಮಾಡಿದವರು. ಏನನ್ನು ನೋಡಿದರೂ, ನಾವು ಅದನ್ನು ಆ ಕನ್ನಡಕದ ಮೂಲಕವೇ ನೋಡುತ್ತೇವೆ. ಹೀಗಾಗಿ ಭಾರತದ ರಿಲಿಜಿಯನ್, ಜಾತಿ ವ್ಯವಸ್ಥೆ, ನಮ್ಮ ವಚನಗಳು- ಎಲ್ಲವೂ ಇಂಗ್ಲಿಷರ ಕಣ್ಣಿಗೆ ಕಂಡಂತೆಯೇ ಕಾಣುತ್ತವೆ. ಅವರು ಒಂದು ಪುಸ್ತಕ (ಬೈಬಲ್), ಒಬ್ಬ ದೇವರು ಮತ್ತು ಒಂದು ಗುಡಿ (ಚರ್ಚ್) ಎಂಬ ಸಿದ್ಧಾಂತದ ಹಿನ್ನೆಲೆಯಿಂದ ಬಂದವರು. ಆದರೆ ಭಾರತದಲ್ಲಿ ಅಂಥ ಯಾವುದೇ ರಿಲಿಜಿಯನ್ ಇರಲಿಲ್ಲ, ಅವರ ಪ್ರಕಾರ ರಿಲಿಜಿಯನ್ನೇ ಇಲ್ಲದ ಜನಸಮೂಹವೊಂದು ಪ್ರಪಂಚದಲ್ಲಿ ಇರಲು ಸಾಧ್ಯವೇ ಇಲ್ಲ. ಹೀಗಾಗಿ, ಅವರು ಹಿಂದೂ ಧರ್ಮ ಅಂತ ಒಂದಿದೆ, ಉಪನಿಷತ್ತುಗಳೇ ಅಂತಿಮ ಗ್ರಂಥಗಳು ಎಂಬ ನಿಲುವಿಗೆ ಬಂದುಬಿಟ್ಟರು. ಇಂಗ್ಲಿಷರ, ಅದರಲ್ಲೂ ಕ್ರಿಶ್ಚಿಯನ್ನರ ತತ್ವಗಳ ನೆರಳಿನಲ್ಲೇ ನಾವು ಬೆಳೆದವರಾದ್ದರಿಂದ ನಮಗೂ ಅದು ಹೌದೆನ್ನಿಸಿತು. ನಮ್ಮ ನಡುವಿನ ಸೆಕ್ಯುಲರ್ ಚಿಂತಕರಾದರೂ ಯಾರು? ಅವರೂ ಇದೇ ಶಾಲೆಯಲ್ಲಿ ಕಲಿತವರು. ಅವರು ದೇವರನ್ನು ಬದಿಗಿಟ್ಟರಬಹುದು: ಆದರೆ, ಪೂಜೆ ಪುನಸ್ಕಾರ, ಜಾತಿ, ಆಚಾರ ಮುಂತಾದವುಗಳನ್ನು ಬೇರೆ ಕನ್ನಡಕದಲ್ಲಿ ನೋಡಲು ಅವರಿಗೂ ಸಾಧ್ಯವಾಗಿಲ್ಲ ಎಂದಿದ್ದರು ಬಾಲು.

''ರಿಲಿಜಿಯನ್ನೂ ಸೇರಿದಂತೆ ಒಟ್ಟಾರೆಯಾಗಿ ಸಮಾಜದ ಎಲ್ಲವನ್ನೂ ಈಗ ಹೊಸದಾಗಿ, ಹೊಸ ದೃಷ್ಟಿಕೋನದಿಂದ ನೋಡಲು ಬಾಲುವಿಗೆ ಸಾಧ್ಯವಾಗಿದೆ'' ಅಂದವರು ಪ್ರೊ.ಸಿವರಾಮಕೃಷ್ಣನ್. ಅವರು ಎಷ್ಟು ನಿರ್ದಿಷ್ಟವಾಗಿ ಬಾಲುವಿನ ಸಿದ್ಧಾಂತದ ಬಗ್ಗೆ, ಕೆಲವೊಮ್ಮೆ ಹೊರಗಿನವರಾಗಿಯೂ ನಿಂತು ನೋಡಿ ಮಾತನಾಡಿದರು ಅಂದರೆ, ಸ್ವತಃ ಬಾಲು ನಿಂತು ತಮ್ಮ ಸಿದ್ಧಾಂತದ ಬಗ್ಗೆ ಮಾತನಾಡಿದ್ದಿದ್ದರೂ ಅದು ಇಷ್ಟೊಂದು ಸ್ಪಷ್ಟವಾಗುತ್ತಿರಲಿಲ್ಲ. ಒಂದು ಮಾತು ನಿಜ: ಬಾಲು ಕೆಲವೊಮ್ಮೆ ತಮ್ಮ ಬರಹ ಮತ್ತು ವಾದದಲ್ಲಿ ತುಂಬ ಅರೋಗೆಂಟ್ ಅನ್ನಿಸುತ್ತಾರೆ. (Of course, ಅವರ ವಿಶ್ವವಿದ್ಯಾಲಯದ ಹೆಸರೇ-ಗೆಂಟ್!)) ನಾವು ಶತಶತಮಾನಗಳಿಂದ ನಂಬಿಕೊಂಡು ಬಂದ ಸಿದ್ಧಾಂತಗಳೇ ಸುಳ್ಳು, ವಚನ ಚಳವಳಿಯೆಂಬುದು ಜಾತಿ ನಾಶದ - ಜಾತಿ ವಿರೋಧದ ಚಳವಳಿಯೇ ಅಲ್ಲ ಅನ್ನುತ್ತಾರೆ. ಅದನ್ನು ಪ್ರಶ್ನಿಸಲು ಹೋದರೆ, ವಚನಗಳಲ್ಲಿ ಎಲ್ಲಾದರೂ ಜಾತಿಯ - ಜಾತಿ ನಿರ್ಮೂಲನೆಯ ಪ್ರಸ್ತಾಪವಿದ್ದರೆ ತೋರಿಸಿ ಎಂದು ಹಟಕ್ಕೆ ಬೀಳುತ್ತಾರೆ. ಈ ಬಗ್ಗೆ ಹೆಗ್ಗೋಡಿನಲ್ಲಿ ಅನಂತಮೂರ್ತಿಗಳಂಥವರೊಂದಿಗೆ ಪ್ರೊ.ಬಾಲು ಅವರ ಹಾಕ್ಯಾಟಗಳಾಗಿವೆ. ಕೆಲವೊಮ್ಮೆ ಬಾಲು ಶುದ್ಧ ಆರೆಸ್ಸೆಸ್ಸಿನವರಂತೆ ಕಂಡು ಬಂದಿದ್ದಾರೆ. ಆರೆಸ್ಸೆಸ್ಸಿನವರಿಗೆ ''ಇವನ್ಯಾವನೋ ಪ್ರಳಯಾಂತಕ ಸಂಕೇತಿ! ಆದರೆ ನಮ್ಮ ಧಾಟಿಯಲ್ಲಿ ಇವನು ಮಾತನಾಡುತ್ತಿಲ್ಲವಲ್ಲ!'' ಅಂತ ಗಾಬರಿಯಾಗಿದೆ. ಇಂಥವುಗಳಿಗೆಲ್ಲ ನಿನ್ನೆ ಒಂದು ನಿಶ್ಚಿತ ತಿರುವು ನೀಡಿದ್ದು ಪ್ರೊ.ಸಿವರಾಮಕೃಷ್ಣನ್ ಅವರ ಅಪರೂಪದ ಭಾಷಣ. ಇದು ಭಾರತದ ಹಾಗೂ ಕರ್ನಾಟಕದ ಇತಿಹಾಸಕ್ಕೆ ಮತ್ತೊಂದು ತಿರುವಾ? ಹೊಸ ಚಳವಳಿಯೊಂದು ಟಿಸಿಲೊಡೆಯುತ್ತಿದೆಯಾ? ಅಪರೂಪದ ಸತ್ಯವೊಂದನ್ನು ಬಾಲು ನುಡಿಯತೊಡಗಿದ್ದಾರಾ? ಕುವೆಂಪು ವಿಶ್ವವಿದ್ಯಾಲಯದಲ್ಲಿ ಬಾಲುವಿನ ಸಿದ್ಧಾಂತವನ್ನು ಶ್ರದ್ಧೆಯಿಂದ ಓದಿಕೊಂಡು ಚಾರಿತ್ರಿಕ ಚಳವಳಿಗೆ ಅನುವಾಗುತ್ತಿದ್ದಾರಾ? ಹಾಗಾದದ್ದೇ ಆದರೆ ಮೊದಲು ಸಂತೋಷಪಡುವವನು ನಾನು.

ಎಲ್ಲವೂ ಭ್ರಷ್ಟಗೊಂಡು ನಿಸ್ತೇಜವಾಗಿರುವ ಇವತ್ತಿನ ಸ್ಥಿತಿಯಲ್ಲಿ ಒಂದು ನೂತನ ಚಳವಳಿಯ ಅಗತ್ಯವಿದೆ. ಇವತ್ತು ನಮ್ಮ ಪರಿಸ್ಥಿತಿ ಆಶಾದಾಯಕವಾಗಿಲ್ಲ. ಎಂಥ ಸಂಶೋಧನಾಕಾರರು ಕೂಡ ವಿಚಿತ್ರ ದನಿಯಲ್ಲಿ, ತಾವು ಕಂಡುಕೊಂಡ ಸತ್ಯಗಳನ್ನು ಹೇಳಬಲ್ಲ ಸ್ವಾತಂತ್ರ್ಯ ಉಳಿದಿಲ್ಲ. ಪ್ರತಿ ಮಾತಿಗೂ ಜಾತಿಗಳು ಎದ್ದು ಕೂಡುತ್ತವೆ. ಯಡಿಯೂರಪ್ಪನನ್ನು ಬಸವಣ್ಣನ ಅವತಾರವೆಂದೂ, ಸಿದ್ದರಾಮಯ್ಯನನ್ನು ಕನಕದಾಸರ ಮುಂದುವರಿಕೆಯೆಂದೂ, ಪೇಜಾವರ ಸ್ವಾಮಿಯನ್ನು ಮಹಾ ವಿಷ್ಣುವಿನ ಪುನರಾವತಾರವೆಂದೂ ತೀರ್ಮಾನಿಸಿ ಪಲ್ಲಕ್ಕಿಗೆ ಹೆಗಲು ಕೊಡುತ್ತಿರುವ ಮೂಢರ ನಾಡಿನಲ್ಲಿ ಬಾಲುವಿನಂಥ ಚಿಂತಕರಿಗೆ ಪ್ರಾಶಸ್ತ್ಯ ಸಿಗಬೇಕು. ಮನೆಯ ಮೂಲೆಯಲ್ಲಿದ್ದ ದೇವರು-ಧರ್ಮಗಳನ್ನು ಬೀದಿಗೆ ಎಳೆತಂದು, ಜನರ ಕೈಗೆ ಬಂದೂಕನ್ನೂ- ಸೊಂಟಕ್ಕೆ ಬಾಂಬನ್ನೂ ಮೆತ್ತಿದ ಪಾಕಿಸ್ತಾನದಂತಹ ದೇಶಗಳು ಇವತ್ತು ಯಾವ ಸ್ಥಿತಿಗೆ ತಲುಪಿವೆ ಎಂಬ ಎಚ್ಚರಿಕೆಯನ್ನಿಟ್ಟುಕೊಂಡು ನಾವು ಹೆಜ್ಜೆಯಿಟ್ಟರೆ, ಇವತ್ತಿಗಿರುವಷ್ಟಾದರೂ ಆರೋಗ್ಯ ಉಳಿದೀತೇನೋ!

**- ರವಿ ಬೆಳಗೆರೆ**